ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ, (ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 2 ಚಾ ಸಾ 2

ಹೆಸರುಃ ಗಂಗಾರಾಮ್

ತಂದೆಯ ಹೆಸರುಃ ಚುನೀಲಾಲ್

ವಯಸ್ಸುಃ 32 ವರ್ಷ

ಉದ್ಯೋಗಃ ವ್ಯಾಪಾರ

ವಾಸಃ ಕೆ.ಆರ್.ಸಾಗರ.

ದಿಃ 23.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

1. ನನ್ನ ತಂದೆ ತಾಯಿಗೆ ನಾವು ಆರು ಜನ ಮಕ್ಕಳು. ಅವರೆಂದರೆ ಗಣೇಶ್, ರಾಜುಬಾಯಿ, ಹರಿಲಾಲ್, ಸೀತಾಬಾಯಿ, ದಲ್ಲುಬಾಯಿ ಮತ್ತು ನಾನು.

2. ನಾನು ಮೃತೆ ಲಕ್ಷ್ಮಿಯನ್ನು ಮದುವೆಯಾಗಿದ್ದೇನೆ. ನಮಗೆ ಮೂರು ಜನ ಮಕ್ಕಳು. ಅವರೆಂದರೆ ರಾಜ್, ಕೋಮಲ್ ಮತ್ತು ಕುನಾಲ್.

3. ನನ್ನ ತಂದೆ ಮೃತಪಟ್ಟಿದ್ದಾರೆ, ತಾಯಿ ಇದ್ದಾರೆ.

4. ನಾನು, ಲಕ್ಷ್ಮೀ ಮತ್ತು ನನ್ನ ಮೂರು ಜನ ಮಕ್ಕಳು ಕೆ.ಆರ್. ಸಾಗರದ ಬಜಾಜ್ ಸ್ಟ್ರೀಟ್ ನಲ್ಲಿರುವ ನನ್ನ ತಾಯಿ ಕಕ್ಕುಬಾಯಿಗೆ ಸೇರಿದ ಮನೆಯಲ್ಲಿ ವಾಸವಿದ್ದೆವು.

5. ಕೆ.ಆರ್. ಸಾಗರದ ಬಜಾಜ್ ಸ್ಟ್ರೀಟ್ ನಲ್ಲಿರುವ ನನ್ನ ತಾಯಿ ಕಕ್ಕುಬಾಯಿಗೆ ಸೇರಿದ ಮನೆಯಲ್ಲಿ ಗಣೇಶ್, ಹರಿಲಾಲ್ ಮತ್ತು ನಾನು ಅವರವರ ಕುಟುಂಬದ ಜೊತೆಯಲ್ಲಿ ಆ ಮನೆಯನ್ನು ಮೂರು ಬಾಗಗಳನ್ನಾಗಿ ಮಾಡಿ ಪ್ರತ್ಯೇಕವಾಗಿ ವಾಸವಿದ್ದೆವು.

6. ನಾವು ಅಣ್ಣತಮ್ಮಂದಿರು ಬಟ್ಟೆ ವ್ಯಾಪರ, ಪ್ಲಾಸ್ಟಿಕ್ ಹೂವಿನ ವ್ಯಾಪಾರ ಮತ್ತು ಗಾಜಿನ ಅಲಂಕಾರಿಕ ವಸ್ತುಗಳ ವ್ಯಾಪಾರವನ್ನು ಮಾಡುತ್ತೇವೆ.

7. ನಾವು ಆ ರೀತಿ ವ್ಯಾಪಾರವನ್ನು ತಮಿಳುನಾಡು, ಆಂದ್ರಪ್ರದೇಶ, ಕೇರಳ ಮತ್ತು ಕರ್ನಾಟಕದಲ್ಲಿ ಮಾಡುತ್ತೇವೆ.

8. ಆ ರೀತಿ ವ್ಯಾಪಾರಕ್ಕೆಂದು ನಾವು ಹೋದರೆ ಕೆಲವೊಂದು ಸಲ ಒಂದು ತಿಂಗಳಿಗೆ ಒಂದು ಸಲ ಮತ್ತು ಕೆಲವೊಮ್ಮೆ ಒಂದೂವರೆ ತಿಂಗಳಿಗೆ ಒಂದು ಸಲ ಮನೆಗೆ ಬರುತ್ತಿದ್ದೆವು.

9. ಆ ಸಮಯದಲ್ಲಿ ನನ್ನ ಅಣ್ಣ ಗಣೇಶ್, ಆತನ ಹೆಂಡತಿ ಮತ್ತು ಇಬ್ಬರು ಮಕ್ಕಳು ಆಂದ್ರಪ್ರದೇಶದ ಮೆಹಬೂಬ್ ನಗರದಲ್ಲಿ ವ್ಯಾಪಾರ ಮಾಡಿಕೊಂಡು ಇದ್ದರು.

10. ನನ್ನ ಅಣ್ಣ ಗಣೇಶನ ಇನ್ನೊಬ್ಬ ಮಗ ಗೋವಿಂದ ವಿದ್ಯಾಭ್ಯಾಸಕ್ಕಾಗಿ ನನ್ನ ಮನೆಯಲ್ಲಿ ಇದ್ದ.

11. ನಾವು ವ್ಯಾಪಾರಕ್ಕೆಂದು ಹೊರಗೆ ಹೋದಾಗ ನಮ್ಮ ಮನೆನಯಲ್ಲಿ ನನ್ನ ಹೆಂಡತಿ,ನನ್ನ ಮೂರು ಜನ ಮಕ್ಕಳು ಮತ್ತು ನನ್ನ ಅಣ್ಣನ ಮಗ ಗೋವಿಂದ ಇದ್ದರು.

12. ಈ ಘಟನೆಯ ಸಂದರ್ಭದಲ್ಲಿ ನಾನು ಕೋಲಾರದ ಮುಳಬಾಗಿಲಿನಲ್ಲಿ ಇದ್ದೆ.

13. ಈ ವರ್ಷದ ಫೆಬ್ರುವರಿ 6ನೇ ತಾರೀಖಿನಂದು ಬೆಳಿಗ್ಗೆ 6-30 ಗಂಟೆಗೆ ನನ್ನ ಅಕ್ಕನ ಮಗಳು ಲಕ್ಷೀ ನನಗೆ ಫೋನ್ ಮಾಡಿ ನಿಮ್ಮ ಮನೆಯಲ್ಲಿ ನಿಮ್ಮ ಹೆಂಡತಿ, ಮೂರು ಜನ ಮಕ್ಕಳು ಮತ್ತು ಗೋವಿಂದನಿಗೆ ಏಟಾಗಿ ರಕ್ತದ ಮಡುವಿನಲ್ಲಿ ಇದ್ದಾರೆ ಬೇಗ ಬನ್ನಿ ಎಂದು ನನಗೆ ತಿಳಿಸಿದರು.

14. ಮುಳಬಾಗಿಲಿನಲ್ಲಿ ಇದ್ದ ನನ್ನ ತಾಯಿಯ ಜೊತೆಯಲ್ಲಿ ತಕ್ಷಣ ನಾನು ಕಾರಿನಲ್ಲಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಬಂದೆ.

15. ನಾನು ನೋಡಿದಾಗ ಲಕ್ಷ್ಮಿಯ ಮುಖಕ್ಕೆ ಮತ್ತು ನಾಲ್ಕು ಜನ ಮಕ್ಕಳ ಮುಖಕ್ಕೆ ಏಟುಗಳಾಗಿ ಅವರು ಧರಿಸಿದ್ದ ಬಟ್ಟೆಗಳಿಗೆಲ್ಲಾ ರಕ್ತದ ಕಲೆಗಳಾಗಿದ್ದವು.

16. ನಾನು ಪೊಲೀಸರನ್ನು ವಿಚಾರಿಸಿದಾಗ ಲಕ್ಷೀ ಮತ್ತು ನಾಲ್ಕು ಜನ ಮಕ್ಕಳನ್ನು ಯಾರೋ ಕೊಲೆ ಮಾಡಿದ್ದಾರೆ ಎಂದು ನನಗೆ ತಿಳಿಸಿದರು.

17. ಆಸ್ಪತ್ರೆಯಿಂದ ಶವಗಳನ್ನು ತೆಗೆದುಕೊಂಡು ಕೆ.ಆರ್.ಸಾಗರಕ್ಕೆ ಬಂದೆವು.

18. ನಾನು ಸೀತಾ ಮತ್ತು ಚಾ ಸಾ 1 ಲಕ್ಷ್ಮಿಯನುನ ವಿಚಾರಿಸಿದಾಗ ನಾವಿಬ್ಬರು ಮನೆಗೆ ಪ್ರವೇಶಿಸಿ ರೂಂ ನಲ್ಲಿ ನೋಡಿದಾಗ ಮುಖಕ್ಕೆ ಬೆಡ್ ಶೀಟ್ ಹಾಸಲಾಗಿತ್ತು, ತೆಗೆದು ನೋಡಿದಾಗ ಗಾಯಗಳಾಗಿದ್ದವು ಎಂಬ ವಿಚಾರವನ್ನು ನನಗೆ ತಿಳಿಸಿದರು.

19. ಮರುದಿನ ಪೊಲೀಸರು ಕೆ.ಆರ್. ಸಾಗರಕ್ಕೆ ಬಂದು ನನ್ನನ್ನು ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿ ನನ್ನ ಹೆಂಡತಿಯ ದೊಡ್ಡಮ್ಮನ ಮಗಳು ಲಕ್ಷ್ಮಿಯನ್ನು ತೋರಿಸಿ ಈಕೆ ನಿನಗೆ ಗೊತ್ತಾ ಎಂದು ನನ್ನನ್ನು ಕೇಳಿದರು. ಆಗ ನಾನು ಆಕೆ ನನಗೆ ಗೊತ್ತು. ನನ್ನ ಹೆಂಡತಿಯ ದೊಡ್ಡಮ್ಮನ ಮಗಳು ಎಂದು ಗುರುತಿಸಿದೆ.

20. ಕೊನೆಯ ನಂ. 355 ಇರುವ ಮೊಬೈಲ್ ಸಂಖ್ಯೆಯಿಂದ ನನ್ನ ಹೆಂಡತಿಯ ಮೊಬೈಲ್ ಗೆ ಮತ್ತು ನನ್ನ ಮೊಬೈಲ್ ಗೆ ಒಬ್ಬ ಹೆಂಗಸು ಫೋನ್ ಮಾಡುತ್ತಿದ್ದಳು.

21. ಆ ರೀತಿ ಕರೆ ಮಾಡಿದ ವ್ಯಕ್ತಿ ನನ್ನ ಹೆಂಡತಿಗೆ ನಿನ್ನ ಗಂಡನಿಗೆ ಬೇರೆಯವರ ಜೊತೆ ಅಕ್ರಮ ಸಂಬಂಧವಿದೆ ಎಂದು ಹೇಳಿ ಹಿಂಸೆ ಕೊಡುತ್ತಿದ್ದಳು.

22. ಅದೇ ನಂಬರಿನಿಂದ ನನ್ನ ಮೊಬೈಲ್ ಗೆ ಫೋನ್ ಮಾಡಿ ನಿನ್ನ ಹೆಂಡತಿ ಬೇರೆಯವರ ಜೊತೆಯಲ್ಲಿ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಾಳೆ ಎಂದು ಹೇಳಿ ಹಿಂಸೆ ಕೊಡುತ್ತಿದ್ದಳು.

23. ಕೆ.ಆರ್.ಸಗರದ ಬಜಾರ್ ಲೈನ್ ನಲ್ಲಿರುವ ಆಂಜನೇಯ ದೇವಸ್ಥಾನದ ಹಿಂಬಾಗದಲ್ಲಿ ರಾಜಣ್ಣ ಎನ್ನುವವರ ಮನೆ ಇದೆ ಮತ್ತು ಆ ಮನೆಗೆ ಸಿಸಿ ಕ್ಯಾಮೆರಾವನ್ನು ಅಳವಡಿಸಲಾಗಿತ್ತು.

24. ಸದರಿ ರಾಜಣ್ಣನ ಮನೆಗೆ ಪೋಲೀಸರು ನನ್ನನ್ನು ಕರೆದುಕೊಂಡು ಹೋಗಿ ಆತನ ಮನೆಯ ಸಿಸಿ ಕ್ಯಾಮೆರಾದ ದೃಶ್ಯಾವಳಿಗಳನ್ನು ನನಗೆ ತೋರಿಸಿದರು. ಆ ದೃಶ್ಯಾವಳಿಯ ಪ್ರಕಾರ ಒಬ್ಬ ಹೆಂಗಸು ಬಜಾರ್ ಲೈನ್ ನ ರಸ್ತೆಯಿಂದ ಹೊರಗೆ ಹೋಗುವ ರೀತಿಯಲ್ಲಿ ಕೈಯ್ಯಲ್ಲಿ ಚೀಲ ಇಟ್ಟುಕೊಂಡು ಹೋಗುತ್ತಿದ್ದಳು. ಆ

ದೃಶ್ಯಾವಳಿಯನ್ನು ತೋರಿಸಿ ಪೊಲೀಸರು ಈ ಹೆಂಗಸು ನಿಮಗೆ ಗೊತ್ತೇ ಎಂದು ಕೇಳಿದಾಗ ನಾನು ಆ ದೃಶ್ಯಾವಳಿಗಳನ್ನು ನೋಡಿಕೊಂಡು ಆಕೆ ನನ್ನ ಹೆಂಡತಿಯ ದೊಡ್ಡಮ್ಮನ ಮಗಳು ಲಕ್ಷ್ಮಿ ಎಂದು ತಿಳಿಸಿರುತ್ತೇನೆ.

25. ಪೊಲೀಸರು ಸದರಿ ಸಿಸಿ ಕ್ಯಾಮೆರಾದ ದೃಶ್ಯಾವಳಿಗಳನ್ನು ಪೆನ್‌ಡ್ರೈವ್ ಮೂಲಕ ಸಂಗ್ರಹಿಸಿಕೊಂಡರು. ಆ ಸಂದರ್ಭದಲ್ಲಿ ಪೊಲೀಸರು ಈಗ ನೋಡಿದ ದಾಖಲೆಗೆ ಪೊಲೀಸರು ನನ್ನ ರುಜು ಪಡೆದಿದ್ದಾರೆ. ಸಾಕ್ಷಿಯು ತನ್ನ ರುಜು ಇರುವುದಾಗಿ ಗುರುತಿಸಿದ ದಾಖಲೆಯನ್ನು ನಿ ಪಿ 4 ಮತ್ತು ಸಾಕ್ಷಿಯ ರುಜುವನ್ನು ನಿ ಪಿ 4 ಎ ಎಂದು ಗುರುತಿಸಲಾಯಿತು.

26. ಆ ರೀತಿ ಪೊಲೀಸರು ನನಗೆ ತೋರಿಸಿದ ದೃಶ್ಯಾವಳಿಯನ್ನು ಈಗ ನೋಡಿದೆ. **(ಸದರಿ ದೃಶ್ಯಾವಳಿಯು ಪೆನ್‌ಡ್ರೈವ್ ನಲ್ಲಿ ಇದ್ದುದನ್ನು ಮಾನ್ಯ ಅಭಿಯೋಜಕರು ಮತ್ತು ಶ್ರೀ ಎಸ್ ಆರ್ ಎಸ್ ವಕೀಲರ ಸಮಕ್ಷಮದಲ್ಲಿ ಲ್ಯಾಪ್ಟಾಪ್ ಮೂಲಕ ಸಾಕ್ಷಿಗೆ ತೋರಿಸಲಾಯಿತು.)** ಸದರಿ ದೃಶ್ಯಾವಳಿಯನ್ನು ಸಾಕ್ಷಿಯು ನೋಡಿಕೊಂಡು ಉತ್ತರಿಸಿರುವ ಕಾರಣಕ್ಕಾಗಿ ಪೆನ್‌ಡ್ರೈವ್ ಅನ್ನು ನಿ ಪಿ 5 ಎಂದು ಗುರುತಿಸಲಾಯಿತು.

27. ಆ ರೀತಿ ದೃಶ್ಯಾವಳಿಗಳನ್ನು ನನಗೆ ತೋರಿಸಿದ ಸಂದರ್ಭದಲ್ಲಿ ತೆಗೆದಿರುವ ಪೋಟೋಗಳನ್ನು ಈಗ ನೋಡಿದೆ. ಆದರೆ ಸದರಿ ಪೋಟೋದಲ್ಲಿ ನನ್ನ ಇರುವಿಕೆ ಕಂಡು ಬರುತ್ತಿಲ್ಲ. ಸದರಿ ನಾಲ್ಕು

ಫೋಟೋಗಳನ್ನು ನಿ ಪಿ 6 ಎಂದು ಗುರುತಿಸಲಾಯಿತು.

28. ನಿ ಪಿ 5 ಪೆನ್‌ಡ್ರೈವ್ ನಲ್ಲಿ ಕಂಡು ಬರುವ ದೃಶ್ಯಾವಳಿಯು ನಮ್ಮ ಮನೆಯಿಂದ ಬಸ್ ಸ್ಟ್ಯಾಂಡ್ ಕಡೆಗೆ ಹೋಗುತ್ತಿರುವುದಾಗಿದೆ.

29. ಎರಡು ದಿವಸಗಳ ನಂತರ ನನ್ನನ್ನು ಪೊಲೀಸರು ಬೆಲವತ್ತಮಂಟಿಗೆ ಒಂದು ಅಂಗಡಿಗೆ ಕರೆದುಕೊಂಡು ಹೋಗಿ ಆ ಅಂಗಡಿಗೆ ಅಳವಡಿಸಲಾಗಿದ್ದ ಸಿಸಿ ಕ್ಯಾಮೆರಾದ ದೃಶ್ಯಾವಳಿಗಳನ್ನು ತೋರಿಸಿದ್ದಾರೆ.

30. ಸದರಿ ದೃಶ್ಯಾವಳಿಯ ಪ್ರಕಾರ ನಿ ಪಿ 5 ಪೆನ್‌ಡ್ರೈವ್ ನಲ್ಲಿರುವ ದೃಶ್ಯಾವಳಿಯ ರೀತಿಯಲ್ಲಿಯೇ ಸದರಿ ಹೆಂಗಸು ಅದೇ ಚೀಲವನ್ನು ತೆಗೆದುಕೊಂಡು ಹೋಗುತ್ತಿರುವುದು ಕಂಡು ಬಂತು. ಆನಂತರ ವಾಪಸ್ಸು ಬರುವಾಗ ಸದರಿ ಚೀಲ ಆ ಹೆಂಗಸಿನ ಕೈಯ್ಯಲ್ಲಿ ಇರಲಿಲ್ಲ. ಸದರಿ ದೃಶ್ಯಾವಳಿಗಳನ್ನು ನೋಡಿಕೊಂಡು ಆ ಹೆಂಗಸು ನನ್ನ ಹೆಂಡತಿಯ ದೊಡ್ಡಮ್ಮನ ಮಗಳು ಲಕ್ಷ್ಮಿ ಎಂದು ನಾನು ಪೊಲೀಸರಿಗೆ ತಿಳಿಸಿದ್ದೇನೆ.

31. ಆ ರೀತಿ ಪೊಲೀಸರು ನನಗೆ ತೋರಿಸಿದ ದೃಶ್ಯಾವಳಿಯನ್ನು ಈಗ ನೋಡಿದೆ. **(ಸದರಿ ದೃಶ್ಯಾವಳಿಯು ಪೆನ್‌ಡ್ರೈವ್ ನಲ್ಲಿ ಇದ್ದುದನ್ನು ಮಾನ್ಯ ಅಭಿಯೋಜಕರು ಮತ್ತು ಶ್ರೀ ಎಸ್ ಆರ್ ಎಸ್ ವಕೀಲರ ಸಮಕ್ಷಮದಲ್ಲಿ ಲ್ಯಾಪ್ಟಾಪ್**

**ಮೂಲಕ ಸಾಕ್ಷಿಗೆ ತೋರಿಸಲಾಯಿತು.)** ಸದರಿ ದೃಶ್ಯಾವಳಿಯನ್ನು ಸಾಕ್ಷಿಯು ನೋಡಿಕೊಂಡು ಮೊದಲನೇ ದೃಶ್ಯದಲ್ಲಿ ಆರೋಪಿ ಲಕ್ಷ್ಮಿ ಬ್ಯಾಗ್ ಸಮೇತ ಹೋಗುತ್ತಿರುವುದು ನಂತರದದೃಶ್ಯದಲ್ಲಿ ಬ್ಯಾಗ್ ಇಲ್ಲದೇ ಬರಿಗೈಯ್ಯಲ್ಲಿ ಬರುವುದು ಕಂಡು ಬರುತ್ತದೆ ಎಂದು ಉತ್ತರಿಸಿದ್ದಾರೆ. ಸದರಿ ದೃಶ್ಯಾವಳಿಯನ್ನು ಸಾಕ್ಷಿಯು ನೋಡಿಕೊಂಡು ಉತ್ತರಿಸಿರುವ ಕಾರಣಕ್ಕಾಗಿ ಆ ಪೆನ್‌ಡ್ರೈವ್ ಅನ್ನು ನಿ ಪಿ 7 ಎಂದು ಗುರುತಿಸಲಾಯಿತು.

32. ಆ ರೀತಿ ದೃಶ್ಯಾವಳಿಯನ್ನು ಪೆನ್‌ಡ್ರೈವ್ ಮೂಲಕ ಸಂಗ್ರಹಿಸಿಕೊಂಡಾಗ ಮಾಡಿದ ಪಂಚನಾಮೆಗೆ ನಾನು ರುಜು ಮಾಡಿದ್ದೇನೆ. ಸದರಿ ಪಂಚನಾಮೆಯನ್ನು ಈಗ ನೋಡಿದೆ. ಅದರಲ್ಲಿ ನನ್ನ ರುಜು ಇದೆ. ಸಾಕ್ಷಿಯು ಗುರುತಿಸಿದ ಪಂಚನಾಮೆಯನ್ನು ನಿ ಪಿ 8 ಮತ್ತು ಸಾಕ್ಷಿಯ ರುಜುವನ್ನು ನಿ ಪಿ 8 ಎ ಎಂದು ಗುರುತಿಸಲಾಯಿತು.

33. ಆ ರೀತಿ ಪೆನ್‌ಡ್ರೈವ್ ಮೂಲಕ ದೃಶ್ಯಾವಳಿಯನ್ನು ಸಂಗ್ರಹಿಸುವ ಸಂದರ್ಭದಲ್ಲಿ ನಾಲ್ಕು ಪೋಟೋಗಳನ್ನು ತೆಗೆಯಲಾಗಿದೆ. ಆ ಪೋಟೋಗಳನ್ನು ಈಗ ನೋಡಿದೆ. ಸದರಿ ನಾಲ್ಕು ಪೋಟೋಗಳನ್ನು ನಿ ಪಿ 9 ಎಂದು ಗುರುತಿಸಲಾಯಿತು. ಆದರೆ ಸದರಿ ಪೋಟೋದಲ್ಲಿ ನಾನು ಕಂಡು ಬರುತ್ತಿಲ್ಲ.

34. ನ್ಯಾಯಾಲಯದ ಮುಂದಿರುವ ಆರೋಪಿ ಸುನೀಲ್ ಎಂಬ ವ್ಯಕ್ತಿಯನ್ನು ಮದುವೆಯಾಗಿದ್ದಾಳೆ. ಅವರಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಗು ಇದೆ. ಆರೋಪಿ ತನ್ನ ಕುಟುಂಬದೊಂದಿಗೆ ಬೆಲವತ್ತಮಂಟಿಯಲ್ಲಿ ವಾಸವಿದ್ದಳು.

35. ಆರೋಪಿಯ ತಾಯಿಯ ಮನೆ ಹೈದರಾಬಾದ್. ಅದೇ ರೀತಿ ನನ್ನ ಹೆಂಡತಿಯ ತವರುಮನೆ ಕೂಡ ಹೈದರಾಬಾದ್.

36. ನನ್ನ ಮತ್ತು ಆರೋಪಿಯ ನಡುವೆ ಅಕ್ರಮ ಸಂಬಂಧ ಇತ್ತು. ನಾನು ಹೈದರಾಬಾದ್ ನಲ್ಲಿರುವ ನನ್ನ ಅತ್ತೆಯ ಮನೆಗೆ ಹೋಗಿ ಬರುತ್ತಿದ್ದಾಗ ಆರೋಪಿಯ ಪರಿಚಯವಾಗಿ ಫೋನ್ ಮೂಲಕ ಮಾತನಾಡುತ್ತಿದ್ದೆವು. ಆನಂತರ ಆರೋಪಿ ಮತ್ತು ಆಕೆಯ ಕುಟುಂಬ ಹೈದರಾಬಾದ್ ನಿಂದ ಬೆಲವತ್ತಮಂಟಿಗೆ ವಾಸಕ್ಕಾಗಿ ಬಂದಿರುತ್ತಾರೆ.

37. ಆರೋಪಿಯ ಗಂಡ ಸುನೀಲ್ ಕೂಡ ಬಟ್ಟೆಯ ವ್ಯಾಪಾರ ಮಾಡಿಕೊಂಡು ಆಂಧ್ರಪ್ರದೇಶದಲ್ಲಿ ಇದ್ದರು. ಆರೋಪಿ ಮತ್ತು ಆಕೆಯ ಮಕ್ಕಳು ಬೆಲವತ್ತಮಂಟಿಯ ಆರೋಪಿಯ ಮನೆಯಲ್ಲಿ ವಾಸವಿದ್ದರು.

38. ನಾನು ಬೆಲವತ್ತಮಂಟಿಯ ಆರೋಪಿಯ ಮನೆಯಲ್ಲಿ ಮೂರು ಸಲ ಆಕೆಯ ಸಂಪರ್ಕ ಬೆಳೆಸಿದ್ದೇನೆ. ಆನಂತರದಲ್ಲಿ ಆರೋಪಿ ನನಗೆ ಬಾ ಓಡಿ ಹೋಗುವ ಎಂದು ಹೇಳುತ್ತಿದ್ದಳು ಆಗ

ನಾನು ನನಗೆ ಕುಟುಂಬ ಇದೆ ಬೇಡ ಎಂದು ಹೇಳುತ್ತಿದ್ದೆ. ಆಗ ನಾನು ನನ್ನ ಮಕ್ಕಳಿಗೆ ನಾನು ಓದಿಸಬೇಕು, ನಿನ್ನ ಮಕ್ಕಳಿಗೆ ನೀನು ಓದಿಸು, ಇದೆಲ್ಲಾ ಬೇಡ ಎಂದು ಆರೋಪಿಗೆ ತಿಳಿಸಿದೆ. ಅದಕ್ಕೆ ಆರೋಪಿ ಒಪ್ಪಿದಳು.

39. ಆ ರೀತಿ ಒಪ್ಪಿದ ನಂತರ ಮೊಬೈಲ್ ನ ಕೊನೆಯ ಸಂಖ್ಯೆ 355 ರಿಂದ ನನ್ನ ಮತ್ತು ನನ್ನ ಹೆಂಡತಿಯ ಮೊಬೈಲ್ ಗೆ ಫೋನ್ ಮಾಡಿ ಕಿರುಕುಳ ಕೊಡಲಾರಂಭಿಸಿದಳು.

40. ನನ್ನ ಮೊಬೈಲ್ ಗೆ ಫೋನ್ ಮಾಡಿ ಚಿಕ್ಕ ಹೆಣ್ಣು ಮಗುವಿನ ರೀತಿಯಲ್ಲಿ ಮಾಡಿಕೊಂಡು ನಿನ್ನ ಹೆಂಡತಿಗೆ ಬೇರೆಯವರ ಜೊತೆ ಅಕ್ರಮ ಸಂಬಂಧ ಇದೆ ಎಂದು 355 ನಂಬರಿನಿಂದ ತಿಳಿಸುತ್ತಿದ್ದಳು. ಅದೇ ರೀತಿ ನನ್ನ ಹೆಂಡತಿಯ ಮೊಬೈಲ್ ಗೆ ಫೋನ್ ಮಾಡಿ ನಿನ್ನ ಗಂಡನಿಗೆ ಬೇರೆಯವರ ಜೊತೆ ಅಕ್ರಮ ಸಂಬಂಧ ಇದೆ ಎಂದು ಹೇಳುತ್ತಿದ್ದಳು.

41. ಆನಂತರದಲ್ಲಿ ತನಿಖಾಧಿಕಾರಿ ಬೇರೆ ನಂಬರ್ ನಿಂದ ನನ್ನ ಮೊಬೈಲ್ ಗೆ ಫೋನ್ ಮಾಡಿ ಮಾತನಾಡಿಸಿದಾಗ ಮೊದಲು ಬರುತ್ತಿದ್ದ ಕೊನೆಯ ಸಂಖ್ಯೆ 355 ರ ಹೆಂಗಸು ಮಾತನಾಡಿದೆ ರೀತಿಯಲ್ಲಿಯೇ ಆ ರೀತಿ ಕರೆ ಮಾಡಿದ ಹೆಂಗಸಿನ ಸ್ವರ ಕಂಡು ಬಂತು.

42. ಆರೋಪಿ ಲಕ್ಷ್ಮಿಯನ್ನು ಪೊಲೀಸರು ದಸ್ತಗಿರಿ ಮಾಡಿ ಠಾಣೆಗೆ ಕರೆದುಕೊಂಡು ಹೋದರು.

43. ನನ್ನ ಹೆಂಡತಿ, ಮೂರು ಜನ ಮಕ್ಕಳು ಮತ್ತು ಗೋವಿಂದನನ್ನು ಆರೋಪಿಯೇ ಕೊಲೆ ಮಾಡಿದ್ದಾಳೆ ಎಂಬ ವಿಚಾರವು ಸಿಸಿ ಕ್ಯಾಮೆರಾದ ದೃಶ್ಯಾವಳಿಯನ್ನು ಮತ್ತು ಪೋಲೀಸರು ತಿಳಿಸಿದ ನಂತರ ನನಗೆ ಗೊತ್ತಾಯಿತು.

44. ನಾನು ಬೇಕು ಎಂಬ ಕಾರಣಕ್ಕೆ ಆರೋಪಿ ಲಕ್ಷೀ, ನನ್ನ ಹೆಂಡತಿ, ಮೂರು ಜನ ಮಕ್ಕಳು ಮತ್ತು ಗೋವಿಂದನನ್ನು ಕೊಲೆ ಮಾಡಿರುತ್ತಾಳೆ.

45. 5ನೇ ತಾರೀಕಿನಂದು ರಾತ್ರಿ 8-30 ಗಂಟೆಗೆ ಆರೋಪಿಯಿಂದ ನನಗೆ ಮಿಸ್ಡ್ ಕಾಲ್ ಬಂದಿತ್ತು. ಆನಂತರ ನಾನು ಫೋನ್ ಮಾಡಿ ಇದೆಲ್ಲಾ ಬೇಡ ಎಂದು ತಿಳಿಸಿರುತ್ತೇನೆ. ಆಗ ಆಕೆ ನೀನು ನನಗೆ ಬೇಕೇ ಬೇಕು ಎಂದು ಹೇಳಿದ್ದಳು, ನಾನು ಫೋನ್ ಕಟ್ ಮಾಡಿದೆ.

46. ಆ ದಿವಸ ನಾನು 9-30 ರಿಂದ 10 ಗಂಟೆ ಸಮಯದಲ್ಲಿ ನನ್ನ ಹೆಂಡತಿಗೆ ಫೋನ್ ಮಾಡಿ ನನ್ನ ಹೆಂಡತಿ ಮತ್ತು ಮಕ್ಕಳನ್ನು ವಿಚಾರಿಸಿದೆ. ಆರೋಪಿ ನಮ್ಮ ಮನೆಗೆ ಬಂದ ವಿಚಾರವನ್ನು ನನ್ನ

ಹೆಂಡತಿ ನನಗೆ ತಿಳಿಸಿಲ್ಲ.

47. ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಈಗ ನೋಡಿದ ತಾಯಿ ಕಾರ್ಡ್ ಅನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಸದರಿ ತಾಯಿ ಕಾರ್ಡ್ ಅನ್ನು ನಿ ಪಿ 10 ಎಂದು ಗುರುತಿಸಲಾಯಿತು.

48. ಅದೇ ರೀತಿ ನನ್ನ ಮಗ ರಾಜ್ ಗೆ ಸಂಬಂಧಪಟ್ಟ ರಕ್ತದ ಗುಂಪಿನ ವರದಿಯನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಸದರಿ ತಾಯಿ ಕಾರ್ಡ್ ಅನ್ನು ನಿ ಪಿ 11 ಎಂದು ಗುರುತಿಸಲಾಯಿತು.

49. ನನ್ನ ಹೆಂಡತಿ ಮತ್ತು ಮಗ ರಾಜ್ ನ ರಕ್ತದ ಗುಂಪು'ಬಿ' ಪಾಸಿಟೀವ್ ಆಗಿತ್ತು.

**ಆರೋಪಿಯ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದ ಕಲಂ 231(2) ರನ್ವಯ ಸಲ್ಲಿಸಲಾದ ಅರ್ಜಿಯಲ್ಲಿ ಮಾಡಿದ ಆದೇಶಕ್ಕನುಗುಣವಾಗಿ ಮುಂದೂಡಿದೆ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)